ಕಂಪ್ಯೂಟರ್ ಬಳಸುವುದು ಸೂಕ್ತವೆಂದು ಕಂಡುಬರುತ್ತದೆ. ಜ್ಞಾನ ವ್ಯಕ್ತಿ ಯಿಂದ ವ್ಯಕ್ತಿಗೆ ಹರಿಯುವುದೇ ಉತ್ತಮ. ಏಕೆಂದರೆ ಆ ಜ್ಞಾನದಲ್ಲಿ ವ್ಯಕ್ತಿತ್ವದ ಅಂಶವೂ ಸೇರಿಕೊಂಡಿರುತ್ತದೆ.

## ಬುದ್ಧಿಯ ವೃದ್ಧಿ

ಬುದ್ಧಿಯ ವೃದ್ಧಿಗಾಗಿ ಗಣೇಶನನ್ನು ಪ್ರಾರ್ಥಿಸುವುದು, ಅವನಿಗೆ ವಿಶೇಷ ಹರಕೆ ಹೊತ್ತುಕೊಳ್ಳುವುದು ಇತ್ಯಾದಿ ನಮ್ಮಲ್ಲಿ ವಾಡಿಕೆಯಿದೆ.

ಗಣೇಶನು ಹೆಚ್ಚು ಬುದ್ಧಿಶಕ್ತಿಯುಳ್ಳವನೆಂಬ ನಂಬಿಕೆ ಇದಕ್ಕೆ ಮೂಲ. ಆದರೆ ಅವನ ವಾಹನವಾದ ಇಲಿ ಬುದ್ಧಿಶಕ್ತಿಯಲ್ಲಿ ಅವನನ್ನೂ ಮೀರಿಸುವ ಸಾಧ್ಯತೆಯನ್ನು ವಿಜ್ಞಾನಿಗಳು ಕಂಡುಹಿಡಿಯುತ್ತಿದ್ದಾರೆ. ಆಗ ಗಣೇಶನನ್ನು ಬಿಟ್ಟು ಇಲಿಯನ್ನೇ ಪೂಜಿಸಬೇಕಾಗಬಹುದು. ಅವುಗಳನ್ನು ಪೂಜಿಸುವುದರಿಂದ ನಮ್ಮ ಬುದ್ಧಿ ವೃದ್ಧಿಯಾಗದಿದ್ದರೂ ಪರವಾಗಿಲ್ಲ, **‘ಅಲ್ಲೇನಿಲಿಗಳ ಕಾಟವೆ ಕಾಟ’**ವಾದರೂ ತಪ್ಪಿದ್ದರೆ ಚೆನ್ನಾಗಿರುತ್ತಿತ್ತು. ಹಾಗಾಗುವ ಸಂಭವ ಖಂಡಿತ ಇಲ್ಲ. ಅವುಗಳ ಬುದ್ಧಿ ವೃದ್ಧಿಯಾದಷ್ಟೂ ಅವುಗಳ ಕಾಟವೂ ವೃದ್ಧಿಯಾಗುತ್ತದೆಯಷ್ಟೆ. ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ **ಜೊಟ್ಸೀನ್** ಎಂಬ ವಿಜ್ಞಾನಿಯು ಸಾಮಾನ್ಯ ಇಲಿಯ DNAಗೆ NR2Bಎಂಬ ಜೀನನ್ನು (gene) ಸೇರಿಸಿ ಅದರ ನೆನಪುಶಕ್ತಿಯನ್ನು ವೃದ್ಧಿಸುವುದರ ಮೂಲಕ ಅದನ್ನು ಹೆಚ್ಚು ಬುದ್ಧಿಶಾಲಿಯನ್ನಾಗಿ ಮಾಡಿದನು.(ಇಷ್ಟು ಕಾಲ ಗಣೇಶನನ್ನು ಹೊತ್ತಿದ್ದು ಸಾರ್ಥಕವಾಯಿತು).

I.Q.ಗೆ ಸಂಬಂಧಿಸಿದ ಪ್ರತ್ಯೇಕ ಜೀನ್ ಇರಬಹುದೆಂದು ಈಗ ವಿಜ್ಞಾನಿಗಳು ಹೇಳುತ್ತಿದ್ದಾರೆ. ಈ ಜೀನನ್ನು ಅಧಿಕಗೊಳಿಸುವುದರ ಮೂಲಕ ಮೂರ್ಖನನ್ನೂ ಪಂಡಿತನನ್ನಾಗಿ ಮಾಡಬಹುದೆಂದೂ ಅವರು ಅಭಿಪ್ರಾಯ ಪಡುತ್ತಾರೆ. ಆದರೆ ಈ ರೀತಿ ಬುದ್ಧಿವೃದ್ಧಿಯ ಮೂಲಕ ಉತ್ತಮ ವ್ಯಕ್ತಿಗಳನ್ನು ಸೃಷ್ಟಿಸಬಹುದೆಂಬುದಕ್ಕೆ ಯಾವ ಪುರಾವೆಯೂ ಇಲ್ಲ. ‘ಕಾಗೆ ಎಷ್ಟೇ ಜಾಣ ಹಕ್ಕಿಯಾದರೂ ಕೇವಲ ಎಂಜಲನ್ನೇ ತಿನ್ನಬೇಕಾಗಿದೆ’ ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಈ ರೀತಿ ಬುದ್ಧಿವೃದ್ಧಿಯ ಮೂಲಕ ‘ನೀವು ಬೌದ್ಧಿಕ ರಾಕ್ಷಸನನ್ನೇ ಸೃಷ್ಟಿಸುತ್ತಿಲ್ಲ ಎಂದು ಹೇಗೆ ಹೇಳುತ್ತೀರಿ? ನಮ್ಮ ನಿರ್ನಾಮದ ಯೋಜನೆಯನ್ನೇ ನಾವು ಮಾಡುತ್ತಿರಬಹುದು’ ಎಂದು **ಜೆರೆಮಿ ರಿಫ್ಕಿನ್** ಸವಾಲು ಹಾಕುತ್ತಾರೆ.

ಎಷ್ಟೋ ಗಿಡ ಮೂಲಿಕೆಗಳ ಮೂಲಕ, ಕೆಲವು ಬಗೆಯ ವ್ಯಾಯಾಮ ಆಸನಗಳ ಮೂಲಕ ಬುದ್ಧಿಯ ವೃದ್ಧಿಯಾಗುವುದೆಂಬ ಪ್ರತೀತಿ ಮೊದಲಿನಿಂದಲೂ ಇದೆ. **‘ಘೃತೇನ ವರ್ಧತೇ ಬುದ್ಧಿಃ’** ಎಂಬ ಮಾತೂ ನಮ್ಮಲ್ಲಿ ಪ್ರಚಲಿತವಿದೆ. ಈ ವಿಧಾನಗಳ ಮೂಲಕ ಎಷ್ಟೊಂದು ಬೃಹಸ್ಪತಿಗಳ ನಿರ್ಮಾಣವಾಗಿದೆಯೋ ಹೇಳುವುದು ಕಷ್ಟ. ಆದರೆ ನೆನಪು ಮತ್ತು ಬುದ್ಧಿಶಕ್ತಿಯ ವೃದ್ಧಿಗಾಗಿ ಏನೇ ಮಾಡಲು ಸಿದ್ಧರಿರುವ ಅನೇಕ ಬೃಹಸ್ಪತಿಗಳು ನಮ್ಮಲ್ಲಿದ್ದಾರೆ. ಚೀನಾದಲ್ಲಿ ಬೆಳೆಯುವ ಒಂದು ಮರದ ಎಲೆಯಿಂದ ತಯಾರಿಸಿದ **ಗಿಂಕ್ಗೊ ಬಿಲೋಬ** ಎಂಬ ಔಷಧವು ಬುದ್ಧಿಯನ್ನು ಬಹಳ ಚುರುಕುಗೊಳಿಸುತ್ತದಂತೆ. ಅದು ಈಗ ಅಮೆರಿಕದಲ್ಲಿ ಅತ್ಯಂತ ಜನಪ್ರಿಯವಾಗಿದೆಯಂತೆ.

ಕೇವಲ ಬುದ್ಧಿಯ ವೃದ್ಧಿಯಾದರೆ ಸಾಲದು, ಭಾವಶುದ್ಧಿಯೂ ಆಗಬೇಕು. ಇದೂ ಕೂಡ ಜೀನುಗಳ ವ್ಯವಸ್ಥಾಂತರದಿಂದ ಸಾಧ್ಯವಾಗಬಹುದೇನೊ! ಕ್ಲಿನಿಕ್ಕುಗಳಲ್ಲಿಯೇ ಸ್ಥಿತಪ್ರಜ್ಞರನ್ನು ತಯಾರಿಸುವ ಕಾಲ ಬರಬಹುದೇ? ಇಷ್ಟೊಂದು ಸುಲಭ ಪರಿವರ್ತನೆಗೆ ಜಗ್ಗುವಷ್ಟು ಯಂತ್ರ ಸದೃಶನೆ ಮಾನವ?

## ಶಾಶ್ವತ ದೇಹ

ನಾವು ದೇಹ ನಶ್ವರ ಎನ್ನುತ್ತೇವೆ. ಆದರೂ ದೇಹ ಶಾಶ್ವತವಾಗಿ ಉಳಿಯುವುದಾದರೆ ನಮಗೆಲ್ಲರಿಗೂ ಇಷ್ಟವೇ. ಎಷ್ಟೇ ಕಷ್ಟ, ಸಂಕಟಗಳಿದ್ದರೂ ಈ ದೇಹವನ್ನು ಬಿಡಲು ಇಷ್ಟಪಡುವುದಿಲ್ಲ. ನಾವು ಬಿಡದಿದ್ದರೂ ಅದು ನಮ್ಮನ್ನು ಬಿಟ್ಟುಹೋಗುತ್ತದೆ. ಅದು ಉಳಿದರೂ ನಾವು ಅದರಲ್ಲಿ ಉಳಿಯಲಾಗುವುದಿಲ್ಲ. ಅದನ್ನು ಉಳಿಸುವ ಪ್ರಯತ್ನ ಬಹಳ ಪುರಾತನ ಕಾಲದಿಂದಲೂ ನಡೆದಿದೆ. ಈಜಿಪ್ಟಿನ ಮಮ್ಮಿಗಳೇ ಇದಕ್ಕೆ ಸಾಕ್ಷಿ. ಈ ಮಮ್ಮಿಗಳು ಪುನಃ ಜೀವ ತಳೆಯುವಂತಾದರೆ?

ಮುಂದೊಂದು ಕಾಲದಲ್ಲಿ ಹಾಗೂ ಆಗಬಹುದೇನೊ! ಸುಮಾರು ೩೦,೦೦೦ ವರ್ಷಗಳ ಹಿಂದೆ ಸತ್ತುಹೋದ, ದೈತ್ಯಾಕಾರದ (೩.೪ ಮೀಟರ್ ಉದ್ದ),ಕೂದಲುಳ್ಳ ಆನೆಯಂತಹ ಪ್ರಾಣಿಯೊಂದರ ದೇಹವು ಸೈಬೀರಿಯಾದ ಮಂಜಿನ ಭೂಸ್ತರದ ಕೆಳಭಾಗದಲ್ಲಿ ದೊರಕಿದೆಯಂತೆ. ಆ ದೇಹ ಎಷ್ಟು ಸುರಕ್ಷಿತವಾಗಿದೆಯೆಂದರೆ ಅದಕ್ಕೆ ಪುನಃ ಜೀವ ಬರಿಸಬಹುದು ಅಥವಾ ಕ್ಲೋನಿಂಗ್ ಮೂಲಕ ಅದರ ಪ್ರತಿರೂಪದ ಇನ್ನೊಂದು ಪ್ರಾಣಿಯನ್ನು ಸೃಷ್ಟಿಸಬಹುದು ಎಂದು ವಿಜ್ಞಾನಿಗಳು ಕನಸು ಕಾಣುತ್ತಿದ್ದಾರೆ. ಕೆಲವು ವಿಜ್ಞಾನಿಗಳು ಇದು ಅಸಾಧ್ಯವೆಂದು ಹೇಳುತ್ತಾರೆ. ಹಿಮದ ಮೂಲಕ ಹೆಪ್ಪುಗಟ್ಟಿದ DNAಗಳು ಯಥಾಸ್ಥಿತಿಯಲ್ಲಿ ಇರುವಂತೆ ಕಂಡುಬಂದರೂ ಅವುಗಳನ್ನು ಸಜೀವಗೊಳಿಸಲಾಗುವುದಿಲ್ಲವೆಂದು ಅವರು ಹೇಳುತ್ತಾರೆ. ‘ಜೀವನವೆನ್ನುವುದು (ಟೇಪ್)ರಿಕಾರ್ಡರ್‌ನಂತೆ ನಮಗಿಷ್ಟ ಬಂದಾಗ ಪ್ರಾರಂಭಿಸಿ, ಇಷ್ಟ ಬಂದಾಗ ನಿಲ್ಲಿಸುವಂತಹುದಲ್ಲ, ಅದು ಸಂತತವಾಗಿ ಮುಂದುವರಿಯುವಂಥದು’ ಎಂದು ಜೀವಶಾಸ್ತ್ರಜ್ಞ ವಾರ್ಡ್ ವ್ಹೀಲರ್ ಹೇಳುತ್ತಾರೆ. ಒಂದು ವೇಳೆ ಸತ್ತ ದೇಹಕ್ಕೂ ಹೊಸ ಜೀವ ಬರುವಂತಾದರೆ ಈಗಾಗಲೇ ಜನಸಂಖ್ಯೆಯ ಭಾರದಿಂದ ತತ್ತರಿಸುತ್ತಿರುವ ಭೂತಾಯಿಯ ಪಾಡೇನು! ಇಂತಹ ಅವಕಾಶವನ್ನೇ ಹೊಂಚುಹಾಕುತ್ತ **‘ಪರಕಾಯ ಪ್ರವೇಶ’**ಕ್ಕಾಗಿ ಎಷ್ಟೋ ಜೀವಿಗಳು ‘ಪ್ರೇತಕ್ಯೂ’ ನಿಂತಿರಬಹುದು.

ಮನೆ ಮನೆ ಹೊಕ್ಕರೆ
ಅದುವೆ ಪಾವನ ಶೃಂಗಾರ।
ಮಾನವರೆಲ್ಲರ ಬಾಳುವೆಯಾಗ
ಅಗುವುದಪ್ಪಟ ಬಂಗಾರ॥
— ಜಿ.ಎಸ್. ಗುಂಡಪ್ಪ.